## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1104

ಸದಸ್ಯರ ಹೆಸರು :ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ :20.12.2018

ಉತ್ತರಿಸುವ ಸಚಿವರು :ಮಾನ್ಯ ಉನ್ನತ ಶಿಕ್ಷಣ ಸಚಿವರು

| ಪ್ರಶ್ನೆ | ಉತ್ತರ |
| --- | --- |
| ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | 2018–19 ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಖ್ಯೆ 12,674 (ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ) |
| ಅತಿಥಿ ಉಪನ್ಯಾಸಕರಿಗೆ ವೇತನ ಪಾವತಿ ಆಗದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ, ವೇತನ ಪಾವತಿ ಆಗದಿರಲು ಕಾರಣಗಳೇನು ; | ಬಂದಿದೆ.<br>ಅತಿಥಿ ಉಪನ್ಯಾಸಕರ ಗೌರವಧನ ಪಾವತಿ ವಿಳಂಬಕ್ಕೆ ಪ್ರಮುಖ ಕಾರಣಗಳು ಇಂತಿವೆ;<br>• ಪ್ರಸ್ತುತ ಸಾಲಿನ ಆಯವ್ಯಯದಿಂದ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳ ಬಾಕಿ ಗೌರವಧನವನ್ನು ಪಾವತಿಸಿರುವುದರಿಂದ, ಸ್ವಲ್ಪ ಮಟ್ಟಿಗೆ ತಾಂತ್ರಿಕ ಅನುದಾನದ ಕೊರತೆಯಾಗಿ ಈ ಸಾಲಿನ ಅತಿಥಿ ಉಪನ್ಯಾಸಕರಿಗೆ ಗೌರವಧನ ಪಾವತಿಸುವುದು ವಿಳಂಬವಾಗಿದೆ.<br>• ಪ್ರತಿ ವರ್ಷ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿಧ್ಯಾರ್ಥಿಗಳ ಪ್ರವೇಶಾತಿ ನಂತರ ಬೋಧನಾ ಕಾರ್ಯಭಾರದ ಮಾಹಿತಿ ಲಭ್ಯವಾಗುತ್ತಿದ್ದು, ಸದರಿ ಕಾರ್ಯಭಾರವನ್ನು ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರು ಅನುಮೋದಿಸಿದ ನಂತರ ಖಾಯಂ ಉಪನ್ಯಾಸಕರಿಗೆ ಹಂಚಿಕೆ ಮಾಡಿ ನಂತರ ಉಳಿಕೆಯಾಗುವ ಹೆಚ್ಚುವರಿ ಕಾರ್ಯಭಾರದಲ್ಲಿ ಕಲಾ/ವಾಣಿಜ್ಯ ವಿಭಾಗಕ್ಕೆ ಅತಿಥಿ ಉಪನ್ಯಾಸಕರಿಗೆ ವಾರದಲ್ಲಿ 08 ಗಂಟೆ ಹಾಗೂ ವಿಜ್ಞಾನ ವಿಷಯದಲ್ಲಿ ವಾರದಲ್ಲಿ 10 ಗಂಟೆಯಂತೆ ವಿಷಯವಾರು ಒಟ್ಟು ಲಭ್ಯವಾಗುವ ಕಾರ್ಯಭಾರಕ್ಕೆ ಅತಿಥಿ ಉಪನ್ಯಾಸಕರಿಂದ ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಿ ಅರ್ಹತಾ ಪಟ್ಟಿ ತಯಾರಿಸಿ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ಅನುಮೋದನೆ ಪಡೆದು ಗೌರವಧನ ಪಾವತಿಸುತ್ತಿರುವುದರಿಂದ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ವಿಳಂಬವಾಗುತ್ತಿದೆ.<br>• ಅತಿಥಿ ಉಪನ್ಯಾಸಕರ ವೇತನವನ್ನು ಖಜಾನೆ –2ರ ಮೂಲಕ ಸೆಳೆಯುತ್ತಿದ್ದು ಹಲವು ಕಾಲೇಜುಗಳಲ್ಲಿ ಪ್ರಾಂಶುಪಾಲರ ಹಾಗೂ ವಿಷಯ ನಿರ್ವಾಹಕರ ಡಿ.ಎಸ್.ಸಿ.ಕೀಗಳನ್ನು ಪಡೆಯಲು/ ಪುನರ್ ನವೀಕರಿಸಲು ವಿಳಂಬವಾದ ಕಾರಣ ವೇತನ ಪಾವತಿಸಲು ವಿಳಂಬವಾಗಿರುತ್ತದೆ. ಈ ಸಮಸ್ಯೆಯನ್ನು ಬಗೆಹರಿಸಲು ಅಗತ್ಯ ತಂತ್ರಾಂಶವನ್ನು ರೂಪಿಸಲು ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ. |

| | |
|---|---|
| | 2018-19ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರ ಅತಿಥಿ ಉಪನ್ಯಾಸಕರುಗಳ ಗೌರವಧನ ಪಾವತಿಗಾಗಿ ಲೆಕ್ಕ ಶೀರ್ಷಿಕೆ:2202-03-103-2-01-051ರಡಿಯಲ್ಲಿ ಒಟ್ಟು ರೂ.8095.00ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಇದರಲ್ಲಿ ಕೆಳಕಂಡಂತೆ ಮೂರು ಕಂತುಗಳಲ್ಲಿ ಒಟ್ಟು ರೂ. 6071.25ಲಕ್ಷಳನ್ನು ಸರ್ಕಾರದಿಂದ ಬಿಡುಗಡೆ ಮಾಡಿದೆ.<br><br>ಮೊದಲನೇ ತ್ರೈಮಾಸಿಕದಲ್ಲಿ ಬಿಡುಗಡೆ ಮಾಡಿದ ಅನುದಾನ ರೂ.2023.75ಲಕ್ಷಗಳ<br>ದಿನಾಂಕ : 09.04.2018<br>ಎರಡನೇ ತ್ರೈಮಾಸಿಕದಲ್ಲಿ ಬಿಡುಗಡೆ ಮಾಡಿದ ಅನುದಾನ ರೂ.2023.75ಲಕ್ಷಗಳ<br>ದಿನಾಂಕ : 27.07.2018<br>ಮೂರನೇ ತ್ರೈಮಾಸಿಕದಲ್ಲಿ ಬಿಡುಗಡೆ ಮಾಡಿದ ಅನುದಾನ ರೂ.2023.75ಲಕ್ಷಗಳ<br>ದಿನಾಂಕ : 10.10.2018<br>ಆಯವ್ಯಯದಲ್ಲಿ ಹಂಚಿಕೆಯಾದ ಮೊತ್ತಕ್ಕೆ ಆರ್ಥಿಕ ಇಲಾಖೆ ನಿಗಧಿ ಪಡಿಸಿದ ಕಾಲಮಿತಿಯಲ್ಲಿ ಸರ್ಕಾರವು ಮೂರು ತ್ರೈಮಾಸಿಕ ಕಂತುಗಳಲ್ಲಿ ಅನುದಾನವನ್ನು ಬಿಡುಗಡೆ ಮಾಡಿದೆ. ಆದರೆ ಮೂರನೇ ತ್ರೈಮಾಸಿಕ ಅನುದಾನವನ್ನು ಸರ್ಕಾರ ಸಮಯಕ್ಕೆ ಸರಿಯಾಗಿ ಬಿಡುಗಡೆ ಮಾಡಿದ್ದರೂ ಸಹ, ವಾರ್ಷಿಕವಾಗಿ ನಿಗದಿಪಡಿಸಿದ ಅನುದಾನದಲ್ಲಿ ಎರಡನೆಯ ತ್ರೈಮಾಸಿಕ ಅಂತ್ಯದವರೆಗೆ ಬಿಡುಗಡೆಯಾಗಿದ್ದ ರೂ.4047.50ಲಕ್ಷಗಳ ಅನುದಾನದಲ್ಲಿ ನವೆಂಬರ್ 2018ರ ಅಂತ್ಯದವರೆವಿಗೆ ಶೇಕಡಾ 75ರಷ್ಟು ವೆಚ್ಚವಾಗಿರದಿದ್ದ ಕಾರಣ ಮೂರನೆಯ ತ್ರೈಮಾಸಿಕ ಅನುದಾನ ರೂ.2023.75ಲಕ್ಷಗಳ ಅನುದಾವನ್ನು ಸರ್ಕಾರ ದಿನಾಂಕ:05.12.2018ರಂದು ಕಾಲೇಜು ಶಿಕ್ಷಣ ಇಲಾಖೆಗೆ ಅಪ್‌ಲೋಡ್ ಮಾಡಿರುತ್ತದೆ. ಕಾಲೇಜು ಶಿಕ್ಷಣ ಇಲಾಖೆಯಿಂದ ದಿನಾಂಕ:06.12.2018ರಂದು ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಅಪ್‌ಲೋಡ್ ಮಾಡಲಾಗಿದೆ. ಪ್ರಸ್ತುತ ಬಿಡುಗಡೆ ಮಾಡಿದ ಅನುದಾನವನ್ನು ವೆಚ್ಚ ಮಾಡಲಾಗಿದೆ. |
| ಇವರಿಗೆ ವೇತನ ಪಾವತಿಸಲು ಸರ್ಕಾರ ಯಾವಾಗ ಎಷ್ಟು ಅನುದಾನ ಬಿಡುಗಡೆ ಮಾಡಿದೆ; ಅನುದಾನ ಬಿಡುಗಡೆ ಮಾಡಲು ವಿಳಂಬವಾಗಿರಲು ಕಾರಣವೇನು; | |
| ಸರ್ಕಾರ ಬಿಡುಗಡೆ ಮಾಡಿದ ಅನುದಾನವನ್ನು ಕಾಲೇಜುಗಳು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡದಿರುವುದು ನಿಜವೇ; ಹಾಗಿದ್ದಲ್ಲಿ, ಕಾರಣಗಳೇನು; ಈ ಬಗ್ಗೆ ಯಾರ ವಿರುದ್ಧ ಯಾವ ಕ್ರಮಕೈಗೊಳ್ಳಲಾಗಿದೆ; | ಹೌದು<br>• ಅತಿಥಿ ಉಪನ್ಯಾಸಕರ ವೇತನವನ್ನು ಖಜಾನೆ -2ರ ಮೂಲಕ ಸೆಳೆಯುತ್ತಿದ್ದು ಹಲವು ಕಾಲೇಜುಗಳಲ್ಲಿ ಪ್ರಾಂಶುಪಾಲರ ಹಾಗೂ ವಿಷಯ ನಿರ್ವಾಹಕರ ಡಿ.ಎಸ್.ಸಿ.ಕೀಗಳನ್ನು ಪಡೆಯಲು/ ಪುನರ್ ನವೀಕರಿಸಲು ವಿಳಂಬವಾದ ಕಾರಣ ವೇತನ ಪಾವತಿಸಲು ವಿಳಂಬವಾಗಿರುತ್ತದೆ.<br>• ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ:4:ಟಿಎಫ್‌ಪಿ:2018 ದಿನಾಂಕ:24.07.2018ರ & 29.09.2018ರ ಪ್ರಕಾರ ಬಿಡುಗಡೆ ಮಾಡಲಾದ ಅನುದಾನದಲ್ಲಿ ಶೇಕಡ 75ರಷ್ಟು ಅನುದಾನ ಬಳಕೆ ಮಾಡದಿದ್ದಲ್ಲಿ ಮುಂದಿನ ಕಂತಿನ ಅನುದಾನವನ್ನು ಬಿಡುಗಡೆ ಮಾಡಲಾಗುವುದಿಲ್ಲವೆಂದು ಸರ್ಕಾರ ಸ್ಪಷ್ಟ ಸೂಚನೆಯನ್ನು ನೀಡಿರುತ್ತದೆ.<br><br>ಅತಿಥಿ ಉಪನ್ಯಾಸಕರ ಗೌರವಧನ ಪಾವತಿ ಸಂಬಂಧ ಸರ್ಕಾರದಿಂದ 2 ಕಂತುಗಳಲ್ಲಿ ಬಿಡುಗಡೆ ಮಾಡಲಾದ ಅನುದಾನದ ಮೊತ್ತ ರೂ.4047.50ಲಕ್ಷಗಳು ಇದರಲ್ಲಿ ಕಾಲೇಜು ಶಿಕ್ಷಣ ಇಲಾಖೆ ಕಛೇರಿಯ ಹಂತದಲ್ಲಿ ರೂ. 3414.94ಲಕ್ಷಗಳ ಅನುದಾನವನ್ನು 06 ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಆಯಾ ಕಛೇರಿ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಗೌರವಧನ ಪಾವತಿಗಾಗಿ ಬಿಡುಗಡೆ ಮಾಡಲಾಗಿರುತ್ತದೆ.<br><br>ಆದರೆ ಜಂಟಿ ನಿರ್ದೇಶಕರು ಮತ್ತು ಕಾಲೇಜುಗಳ ಹಂತದಲ್ಲಿ ಶೇಕಡ 75ರಷ್ಟು ವೆಚ್ಚ ಮಾಡಿಲ್ಲದಿರುವ ಕಾರಣ 3ನೇ ಕಂತಿನ ಅನುದಾನವನ್ನು ಸರ್ಕಾರ ಖಜಾನೆ-2ರಲ್ಲಿ ಕೇಂದ್ರ |

| | |
|---|---|
| | ಕಛೇರಿಗೆ ಅಪ್‌ಲೋಡ್ ಮಾಡಲಾಗಿರಲಿಲ್ಲ. ಈ ಬಗ್ಗೆ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು ಮತ್ತು ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಸಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ ಹಾಗೂ ವಿಳಂಬ ಮಾಡಿದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮಕೈಗೊಳ್ಳುವುದಾಗಿ ಎಚ್ಚರಿಕೆ ನೀಡಲಾಗಿರುತ್ತದೆ. |
| ಅತಿಥಿ ಉಪನ್ಯಾಸಕರಿಗೆ ಬಾಕಿ ವೇತನ ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಳೇನು?(ಸ್ಪಷ್ಟ ವಿವರ ನೀಡುವುದು) | 2018-19ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರುಗಳ ಗೌರವಧನ ಪಾವತಿಗೆ ರೂ. 8095.00ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಈವರೆಗೆ ಮೂರು ತ್ರೈಮಾಸಿಕ ಕಂತುಗಳಲ್ಲಿ ಒಟ್ಟಾರೆ ರೂ.6071.25ಲಕ್ಷಗಳನ್ನು ಬಿಡುಗಡೆ ಮಾಡಿದೆ. ಪ್ರಸ್ತುತ ಸಾಲಿಗೆ ಒದಗಿಸಿದ ಆಯವ್ಯಯದಲ್ಲಿ ಬಾಕಿಯಿರುವ 4ನೇ ತ್ರೈಮಾಸಿ ಅನುದಾನ ರೂ.2023.75ಲಕ್ಷಗಳನ್ನು ಶೀಘ್ರ ಬಿಡುಗಡೆ ಮಾಡಲು ಅನುಮತಿ ನೀಡುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ. ಇದಲ್ಲದೆ ಪ್ರಸ್ತುತ ಸಾಲಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದೆ. |

(ಜಿ.ಟಿ.ದೇವೇಗೌಡ)
ಉನ್ನತ ಶಿಕ್ಷಣ ಸಚಿವರು

ಇಡಿ 192 ಹೆಚ್‌ಪಿಯು 2018

## ವಿಧಾನ ಪರಿಷತ್ತು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1104ಕ್ಕೆ ಅನುಬಂಧ

### ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಕರ ಜಿಲ್ಲಾವಾರು ಸಂಖ್ಯಾ ಮಾಹಿತಿ

| ಜಿಲ್ಲೆ | ಅತಿಥಿ ಉಪನ್ಯಾಸಕರ ಸಂಖ್ಯೆ |
|---|---|
| ಬೆಂಗಳೂರು | 655 |
| ಬೆಂಗಳೂರು ಗ್ರಾಂ | 145 |
| ರಾಮನಗರ | 252 |
| ಚಿಕ್ಕಬಳ್ಳಾಪುರ | 346 |
| ಕೋಲಾರ | 376 |
| ತುಮಕೂರು | 677 |
| ಮೈಸೂರು | 848 |
| ಚಾಮರಾಜನಗರ | 172 |
| ಮಂಡ್ಯ | 506 |
| ಹಾಸನ | 848 |
| ಶಿವಮೊಗ್ಗ | 597 |
| ಚಿತ್ರದುರ್ಗ | 557 |
| ದಾವಣಗೆರೆ | 524 |
| ಚಿಕ್ಕಮಗಳೂರು | 383 |
| ದಕ್ಷಿಣ ಕನ್ನಡ | 515 |
| ಉಡುಪಿ | 444 |
| ಕೊಡಗು | 113 |
| ಧಾರವಾಡ | 268 |
| ಗದಗ | 279 |
| ಹಾವೇರಿ | 377 |
| ಉತ್ತರ ಕನ್ನಡ | 600 |
| ಬೆಳಗಾವಿ | 491 |
| ಬಾಗಲಕೋಟೆ | 403 |
| ಬಿಜಾಪುರ | 241 |
| ಕಲಬುರಗಿ | 371 |
| ಯಾದಗಿರಿ | 263 |
| ರಾಯಚೂರು | 334 |
| ಕೊಪ್ಪಳ | 371 |
| ಬಳ್ಳಾರಿ | 488 |
| ಬೀದರ್ | 230 |
| **ಒಟ್ಟು** | **12674** |